ಶ್ರೀ ಡಿ. ಸುಧಾಕರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಏನೊಂದು ಪ್ರಶ್ನೆಯನ್ನು ಪ್ರಸ್ತಾಪಿಸಿದ್ದಾರೋ, ಆ ಬಗ್ಗೆ ಪರಿಶೀಲನೆ ಮಾಡಿ, ಬರತಕ್ಕಂಥ ಆರ್ಥಿಕ ವರ್ಷದಲ್ಲಿ ಆ ವಿವಾದವನ್ನು ಬಗೆಹರಿಸಿ, ಅಲ್ಲಿ ಹಾಸ್ಟೆಲ್ ಕಟ್ಟಡ ನಿರ್ಮಾಣ ಕಾರ್ಯ ಪೂರ್ಣಗೊಳಿಸುವುದಕ್ಕೆ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಸುಭಾಷ್ ಆರ್. ಗುತ್ತೇದಾರ್ : ನಮ್ಮಲಿ ಒಂದೇ ಕಡೆಯಲ್ಲಿ ಎಲ್ಲಾ ಆಫೀಸ್‌ಗಳಿವೆ. Power of Attorney ತೆಗೆದುಕೊಂಡು Private ನವರು ಅದನ್ನು 'ನಮ್ಮದು' ಎಂದು ಹೇಳಿಕೊಳ್ಳುತ್ತಿದ್ದಾರೆ. ಅಲ್ಲಿ ಏನೂ ಕೆಲಸ ಮಾಡಲು ಬಿಡುತ್ತಿಲ್ಲ. ಒಂದು quarters ಗೆ ಮತ್ತು ಇನ್ನೊಂದು quarters ಗೂ ಮಧ್ಯದಲ್ಲಿ ಖಾಲಿ ಇದ್ದ ಜಾಗದಲ್ಲಿ ಸಹಿತ private ನವರು building ಕಟ್ಟಿದ್ದಾರೆ ಅಲ್ಲಿ ಎಲ್ಲಾ ಆಫೀಸ್‌ಗಳಿವೆ. ಅಲ್ಲಿ education department office ಇದೆ, veterinary department office ಇದೆ. Horticulture, Taluk Panchayath Office, PWD Office ಎಲ್ಲವೂ ಸಹಿತ ಅಲ್ಲೇ ಇದೆ. ಇವೆಲ್ಲದರ ಮಧ್ಯೆದಲ್ಲಿ private ನವರು occupy ಮಾಡುತ್ತಿದ್ದಾರೆ. ದಯವಿಟ್ಟು ಈ ಬಗ್ಗೆ ಪರಿಶೀಲನೆ ಮಾಡಿಕೊಂಡು ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ಸುಧಾಕರ್ : ಮಾನ್ಯ ಅಧ್ಯಕ್ಷರೆ, ಈಗಾಗಲೇ ನಾನು ಉತ್ತರ ಕೊಟ್ಟಿದ್ದೇನೆ. ಅದನ್ನು ಪರಿಶೀಲನೆ ಮಾಡಿ, ಬರತಕ್ಕಂಥ ಆರ್ಥಿಕ ವರ್ಷದಲ್ಲಿ ಅದನ್ನು ಮಾಡಿಸಿಕೊಡುತ್ತೇನೆ.

ಬೀದರ್ ನಗರ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವ ಬಗ್ಗೆ

113 (1492) ಶ್ರೀ ರಹೀಮ ಖಾನ (ಬೀದರ್) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ನಗರದಲ್ಲಿ ಸುಮಾರು 20 ವರ್ಷಗಳ ಹಿಂದೆ 10 ಹಾಸಿಗೆಯ ಪ್ರಸೂತಿ ಆಸ್ಪತ್ರೆ ಪ್ರಾರಂಭಿಸಿರುವುದು ಸರ್ಕಾರದ ಗಮನದಲ್ಲಿಯೇ;

ಬೀದರ್ ನಗರದಲ್ಲಿ ಜನಸಂಖ್ಯೆ ಹೆಚ್ಚಳವಾದರೂ ಇಲ್ಲಿಯವರೆಗೆ 10 ಹಾಸಿಗೆಯ ಇದ್ದು ಇದರಿಂದ ಈ ಭಾಗದ ಜನರಿಗೆ ತುಂಬಾ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಅ) ಈ ವಿಷಯ ಗಮನಕ್ಕೆ ಬಂದಿದ್ದರೆ, ಏನು ಕ್ರಮ ಕೈಗೊಳ್ಳಲಾಗುವುದು;

ಇ) ಈ ಮೇಲ್ಕಂಡ ಆಸ್ಪತ್ರೆಯನ್ನು 100 ಹಾಸಿಗೆಯ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಲು ಸರ್ಕಾರದ ಗಮನದಲ್ಲಿದೆಯೇ;

ಈ) ಇದ್ದರೆ, ಇದನ್ನು ಯಾವಾಗ ಕಾರ್ಯಗತಗೊಳ್ಳುವುದು; ಇದರ ಬಗ್ಗೆ ವಿವರ ನೀಡುವುದು?

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಹೌದು. ಬೀದರ್ ಹಳೇ ನಗರದಲ್ಲಿರುವ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ 10 ಹಾಸಿಗೆಗಳ ಪ್ರಸೂತಿ ಆಸ್ಪತ್ರೆ ಹಾಗೂ 10 ಹಾಸಿಗೆಗಳ ಪೋಲೀಸ್ ಆರೋಗ್ಯ ಘಟಕ ಜೊತೆಗೆ ಬೀದರ್ ನಗರದಲ್ಲಿ ಸುಸಜ್ಜಿತವಾದ 400 ಹಾಸಿಗೆಗಳ ಜಿಲ್ಲಾ ಆಸ್ಪತ್ರೆ ಕಾರ್ಯನಿರ್ವಹಿಸುತ್ತಿವೆ. ಬೀದರ್ ಜಿಲ್ಲಾ ಆಸ್ಪತ್ರೆ ಬೀದರ್ ಹಳೇ ನಗರದಿಂದ ಕೇವಲ 2 ಕಿ.ಮೀ. ಮಾತ್ರ ದೂರದಲ್ಲಿದ್ದು, ಸಾರ್ವಜನಿಕರಿಗೆ ಯಾವುದೇ ತೊಂದರೆ ಇಲ್ಲದೇ ಆರೋಗ್ಯ ಸೌಲಭ್ಯ ಒದಗಿಸಲಾಗುತ್ತಿದೆ.

ಆ) ಉದ್ಭವಿಸುವುದಿಲ್ಲ.

ಇ) ಬೀದರ್ ಹಳೇ ನಗರದಲ್ಲಿರುವ ಪ್ರಸೂತಿ ಆಸ್ಪತ್ರೆ ಹಾಗೂ ಪೋಲೀಸ್ ಆರೋಗ್ಯ ಘಟಕಗಳ ಜೊತೆಗೆ 400 ಹಾಸಿಗೆಗಳ ಸುಸಜ್ಜಿತ ಜಿಲ್ಲಾ ಆಸ್ಪತ್ರೆ ಕಾರ್ಯನಿರ್ವಹಿಸುತ್ತಿರುವ ಕಾರಣ, ಸದರಿ 10 ಹಾಸಿಗೆಗಳ ಪ್ರಸೂತಿ ಆಸ್ಪತ್ರೆಯನ್ನು 100 ಹಾಸಿಗೆಗಳ ಆಸ್ಪತ್ರೆಗೆ ಮೇಲ್ದರ್ಜೆಗೇರಿಸುವ ಅವಶ್ಯಕತೆ ಇರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಪ್ರಶ್ನೆ ಸಂಖ್ಯೆ 113 (1492)

ಶ್ರೀ ರಹೀಮ್ ಖಾನ್ : ಮಾನ್ಯ ಅಧ್ಯಕ್ಷರೇ, ನಮ್ಮ ಬೀದರ್‌ನಲ್ಲಿ ನಿಜಾಮರ ಕಾಲದಿಂದಲೂ ಹಳೆಯ ಆಸ್ಪತ್ರೆಯೊಂದು ಇತ್ತು. ಈಗ ಅದು New City ಗೆ change ಆಗಿ 20 ವರ್ಷಗಳಾಗಿದೆ. Already ಅಲ್ಲಿ building ಇದೆ, ಇತರ ಎಲ್ಲಾ facilities ಇವೆ. ಅಲ್ಲಿ 10 bedded

hospital ಸಹ ಇದೆ. ಅದನ್ನು 100 bedded hospital ಮಾಡಬೇಕೆಂದು ನಾನು ಮಾನ್ಯ ಮಂತ್ರಿಯವರಿಗೆ ಕೇಳಿದ್ದೆ. ಆದರೆ ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಕೇವಲ 2 ಕಿ.ಮೀ. ದೂರದಲ್ಲಿ ಇನ್ನೊಂದು ಆಸ್ಪತ್ರೆ ಇರುವುದರಿಂದ ಇದು ಸಾಧ್ಯವಿಲ್ಲ ಎಂಬ ಉತ್ತರ ಬಂದಿದೆ. ಬೆಂಗಳೂರಿನ ಶಿವಾಜಿನಗರದಲ್ಲಿ Bowring Hospital ಇದೆ, ಅದರ ಅರ್ಧ ಕಿ.ಮೀ. ದೂರದಲ್ಲೇ ಗೌಸಿಯಾ Hospital ಇದೆ, ಅವರ ಅರ್ಧ ಕಿ.ಮೀ. ದೂರದಲ್ಲೇ ಗೌಸಿಯಾ Hospital ಇದೆ.

ಅಧ್ಯಕ್ಷರು : ನೀವು ಪ್ರಶ್ನೆ ಕೇಳಿ.

ಶ್ರೀ ರಹೀಮ್ ಖಾನ್ : Bidar District Hospital ಗೆ ಇಡೀ district ನವರು ಬರುತ್ತಿದ್ದಾರೆ. ಅಲ್ಲಿ ಸುಮಾರು 10 ಲಕ್ಷದಷ್ಟು ಜನರಿದ್ದಾರೆ. ಇಡೀ ರಾಜ್ಯದಲ್ಲೇ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಅಂದರೆ ದಿವಸಕ್ಕೆ 2 ಸಾವಿರ ಜನರು ಅಲ್ಲಿನ OPD ಗೆ ಬರುತ್ತಿದ್ದಾರೆ.

ಅಧ್ಯಕ್ಷರು : ನೀವು ಪ್ರಶ್ನೆ ಕೇಳಿ.

ಶ್ರೀ ರಹೀಮ್ ಖಾನ್ : ಅದರ ಸಲುವಾಗಿ ನಾನು ಮಾನ್ಯ ಮಂತ್ರಿಗಳಿಗೆ request ಮಾಡಿಕೊಳ್ಳುತ್ತೇನೆ. Already, 10 bedded old hospital ನಿಜಾಮರ ಕಾಲದಿಂದಲೂ ಇದೆ. 5 ಎಕರೆ ಜಾಗದಲ್ಲಿ building ಸಹಿತ A to Z facilities ಇದೆ. ನೀವು ಕೇವಲ Hospital bed strength ಅನ್ನು ಮಾತ್ರ 100ಕ್ಕೆ increase ಮಾಡಬೇಕಾಗಿದೆ. ಆ ಬಗ್ಗೆ ಮಾನ್ಯ ಸಚಿವರು ಉತ್ತರಿಸಬೇಕೆಂದು ಕೋರುತ್ತೇನೆ.

ಶ್ರೀ ಬಿ. ಶ್ರೀರಾಮುಲು : ಮಾನ್ಯ ಅಧ್ಯಕ್ಷರೆ, ಬೀದರ್ ನಗರದಲ್ಲಿ 400 bedded hospital ಇದೆ, 10 ಹಾಸಿಗೆಯ ಮೆಟರ್ನರಿ ಹಾಸ್ಪಿಟಲ್ ಕೂಡ ಇದೆ. ಇದಲ್ಲದೆ ಇವುಗಳ ಜೊತೆಯಲ್ಲಿ ಮತ್ತೊಂದು 10 bedded hospital ಕೂಡ ಇದೆ. ಸುಮಾರು 410 ಬೆಡ್ ಆಸ್ಪತ್ರೆ ಇರುವ ಕಾರಣ ಬೀದರ್ ಜಿಲ್ಲಾ ಆಸ್ಪತ್ರೆ ಬೀದರ್ ಹಳ್ಳ ನಗರದಿಂದ ಕೇವಲ 2 ಕಿ.ಮೀ. ಮಾತ್ರ ದೂರವಿರುವ ಕಾರಣ ಅದಕ್ಕೆ ಅವಕಾಶ ಬರುವುದಿಲ್ಲವೆಂದು ಉತ್ತರವನ್ನು ಕೊಟ್ಟಿದ್ದೇನೆ. 23ನೇ ತಾರೀಖು ನಾನು ಬೀದರ್‌ಗೆ ಹೋಗುತ್ತಿದ್ದೇನೆ. ನಾನು ಶಾಕರ ಜೊತೆ ಹೋಗಿ ಪರಿಶೀಲನೆ ಮಾಡಿ ಏನು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕೋ

ಅದನ್ನು ತೆಗೆದುಕೊಳ್ಳುತ್ತೇನೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಪರಿಶಿಷ್ಟ ಜಾತಿ, ವರ್ಗಗಳ ಜಮೀನುದಾರರಿಗೆ ಕೊಳವೆ ಬಾವಿ ಕೊರೆಯುವುದು

117 (1368) ಶ್ರೀ ಕುಮಾರಸ್ವಾಮಿ ಹೆಚ್. ಕೆ (ಸಕಲೇಶಪುರ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 2009–10ರ ವರೆಗೆ ಎಷ್ಟು ಜನ ಪರಿಶಿಷ್ಟ ಜಾತಿ/ವರ್ಗಗಳ ಫಲಾನುಭವಿಗಳ ಜಮೀನುಗಳಿಗೆ ಕೊಳವೆ ಬಾವಿಗಳನ್ನು ಕೊರೆಯಲಾಗಿದೆ; ಪೂರ್ಣ ಮಾಹಿತಿ ನೀಡುವುದು;

ಆ) ಎಷ್ಟು ಫಲಾನುಭವಿಗಳಿಗೆ ವಿದ್ಯುತ್ ಸಂಪರ್ಕ ದೊರಕಿಸಿ ಕೊಡಲಾಗಿದೆ;

ಇ) ಇದರಿಂದ ಎಷ್ಟು ಎಕರೆ ಈವರೆಗೆ ಎಷ್ಟು ಬಾವಿಗಳನ್ನು ಕೊರೆಯಾಗಿದೆ?

ಈ) 2009–10ನೇ ಸಾಲಿನಲ್ಲಿ ಈವರೆಗೆ ಎಷ್ಟು ಬಾವಿಗಳನ್ನು ಕೊರೆಯಲಾಗಿದೆ?

ಶ್ರೀ ಡಿ.ಸುಧಾಕರ್ (ಸಮಾಜ ಕಲ್ಯಾಣ ಸಚಿವರು) :

ಅ) ಪರಿಶಿಷ್ಟ ಜಾತಿಗೆ ಒಟ್ಟು 56846 ಕೊಳವೆ ಬಾವಿಗಳನ್ನು ಕೊರೆಯಲಾಗಿದೆ.

ಪರಿಶಿಷ್ಟ ವರ್ಗಕ್ಕೆ ಒಟ್ಟು 20444 ಕೊಳವೆ ಬಾವಿಗಳನ್ನು ಕೊರೆಯಲಾಗಿದೆ.

ಆ) ಒಟ್ಟು 57180 ಫಲಾನುಭವಿಗಳಿಗೆ ವಿದ್ಯುತ್ ಸಂಪರ್ಕ ದೊರಕಿಸಿ ಕೊಡಲಾಗಿದೆ.

ಇ) ಒಟ್ಟು 228118.10 ಎಕರೆ ಜಮೀನಿಗೆ ಪ್ರಯೋಜನವಾಗಿದೆ.

ಈ) ಒಟ್ಟು 8904 ಕೊಳವೆ ಬಾವಿಗಳನ್ನು ಕೊರೆಯಲಾಗಿದೆ.